ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ.—ಕೆಲವು ಕಡೆಗಳಲ್ಲಿ ಉಪಾಹಾರಗಳನ್ನು ಕೊಡುವಾಗ ಹಾಲಿನ ಪೌಡರುಗಳನ್ನು ಕೊಡುವುದಕ್ಕೆ ಬದಲಾಗಿ ಪ್ರಿಪೇರ್ಡ್ ಪುಡ್‌ನ್ನು ಎಂದೆ ಹಾಲನ್ನು ಗೋಧಿ ಹಿಟ್ಟಿನಲ್ಲಿ ಬೆರಸಿ ಮಾಡಿದ ಪದಾರ್ಥಗಳನ್ನು ಹಂಚುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ವಿ. ಶಂಕರ ಗೌಡ.—ಎಲ್ಲೋ ಕೆಲವು ಕಡೆ ಪ್ರಾಯೋಗಿಕವಾಗಿ ಇಂತಹ ಪ್ರಿಪೇರ್ಡ್ ಪುಡ್ ಕೊಡಲಾಗುತ್ತಿದೆ. ಎಲ್ಲ ಕಡೆಗಳಲ್ಲಿಯೂ ಕೊಡುತ್ತಿಲ್ಲ.

ಶ್ರೀ ಎಸ್. ಎಸ್. ಅರಕೇರಿ.—ಮಿಡ್ ಡೇ ಮಿಲ್ಸ್ ಸ್ಕೀಂ ಎಂದು ಸರಕಾರ ತಂದಿರುವುದರಲ್ಲಿ ಬ್ಲಾಕ್ ಮಾರ್ಕೆಟ್ ಹೆಚ್ಚು ಮಾಡಲು ಅವಕಾಶವಾಗಿದೆ ಎನ್ನುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ವಿ. ಶಂಕರ ಗೌಡ.— ಇದು ಮಾನ್ಯ ಸದಸ್ಯರ ಕಲ್ಪನೆಯಾಗಿದೆ.

Sri J. P. SARVESH,—Due to non-supply of sugar, the students are throwing away the milk. Will the Government consider this nd supply the sugar ?

ಶ್ರೀ ಕೆ. ವಿ. ಶಂಕರ ಗೌಡ.—ಹಾಲಿಗೆ ಸಕ್ಕರೆ ಇಲ್ಲದೆ ಹಾಗೇ ಕೊಡುವುದು ಒಳ್ಳೆಯದು. ಆಯಾ ತಾಲ್ಲೂಕಾ ಬೋರ್ಡಗಳವರು ಇಲ್ಲವೇ ಪಂಚಾಯಿತಿಗಳವರು ಇದಕ್ಕಾಗಿ ಬೇಕಾಗುವ ಸಕ್ಕರೆಯನ್ನು ಕೊಡಬೇಕೆಂದು ವ್ಯವಸ್ಥೆ ಇದೆ. ಡಾಕ್ಟರುಗಳೂ ಕೂಡ ಸಕ್ಕರೆ ಇಲ್ಲದೆ ಹಾಲನ್ನು ಕೊಡಬಹುದು ಎಂದು ಹೇಳುವುದು ಮಾನ್ಯ ಸದಸ್ಯರಿಗೂ ಗೊತ್ತಿರಬಹುದು.

Shifting of L. F. Dispensary

56. **Sri B. PARAMESWARAPPA** (Holalkere).—

Will the Minister for Health and Housing be pleased to state :—

(*a*) the action taken by the Government to shift the L. F. Dispensary from Holalkere to Muthugadur village as the Taluk Board has resolved to shift the same to Muthugadur long back ;

(*b*) the reasons for the delay ?

A.—**Sri K. PUTTASWAMY** (Minister for Health and Housing).—

(*a*) Government do not propose to shift the L. F. Dispensary to Muthugadur as it lies in a population block of 15,000 where there is already a L. F. Dispensary at Baramanayakandurga which is at a distance of 3 miles only from Muthugadur.

(*b*) Does not arise in view of answer to (*a*) above.

ಶ್ರೀ ಬಿ. ಪರಮೇಶ್ವರಪ್ಪ.—ಹೊಳಲ್ಕೆರೆಯಿಂದ ಮುತ್ತುಗದೂರು ಗ್ರಾಮಕ್ಕೆ ಇಲ್ಲಿರುವ ಆಸ್ಪತ್ರೆಯನ್ನು ಸ್ಥಳಾಂತರಿಸುವ ಬಗ್ಗೆ ಶಿಫಾರಸು ಮಾಡಿ ಡಿಸ್ಟ್ರಿಕ್ ಹೆಲ್ತ್ ಆಫೀಸರು ಸರಕಾರಕ್ಕೆ ಮಾಡಿದ್ದರೂ ಅದನ್ನು ಮಾಡುವ ಅಗತ್ಯವಿಲ್ಲ ಎಂದು ಇಲ್ಲಿ ಹೇಳಲು ಕಾರಣಗಳೇನು ? ಮುತ್ತು ಇಲ್ಲಿನ ಜನರ ಸಂಖ್ಯೆ ಕೂಡ 15 ಸಾವಿರಕ್ಕೆ ಮೇಲ್ಪಟ್ಟು ಇದೆ.

ಶ್ರೀ ಕೆ. ಪುಟ್ಟಸ್ವಾಮಿ.—ಇಲ್ಲಿ ತಾಲೂಕಾವಾರು ವಿಂಗಡಣೆ ಮಾಡಿಲ್ಲ. ನಮ್ಮ ಸರ್ಕಾರದ ನೀತಿ ಪ್ರಕಾರ ಪ್ರತಿಯೊಂದು ಬ್ಲಾಕಿಗೂ ಕನಿಷ್ಟ ಪಕ್ಷ ಒಂದು ಪಾಶ್ಚಾತ್ಯ ಔಷಧಿ ಕೊಡತಕ್ಕಂಥ ಒಂದು ಆಸ್ಪತ್ರೆಯನ್ನು ಕೊಡಬೇಕು ಎಂದು ಇದೆ. ಈಗ 6 ಬ್ಲಾಕ್‌ನಲ್ಲಿ ಒಂದೊಂದು ಆಸ್ಪತ್ರೆ ಇದೆ. ಕೆಲವು ಬ್ಲಾಕುಗಳಲ್ಲಿ ಹೆಚ್ಚು ಇದೆ, ಹೊಳಲ್ಕೆರೆ ತಾಲ್ಲೂಕಿನಲ್ಲಿ 9 ಆಸ್ಪತ್ರೆಗಳು ಇವೆ ಎಂದು ಮಾನ್ಯ ಸದಸ್ಯರು ಹೇಳುತ್ತಾರೆ. ಬರಮನಾಯಕನದುರ್ಗ ಮತ್ತು ಮುತ್ತುಗದೂರಿಗೂ 3 ಮೈಲಿ

ಅಲ್ಲ 5 ಮೈಲಿ ಇರಬಹುದು ನನಗೆ ತಿಳಿದಪ್ರಕಾರ 3 ಮೈಲಿ ಇದೆ, ಸ್ವಲ್ಪ ಜಾಸ್ತಿ ಇರಬಹುದು. ಈಗಾಗಲೇ ಸಾಕಷ್ಟು ವೈದ್ಯಕೀಯ ಸೌಲಭ್ಯ ಹೊಳಲ್ಕೆರೆಯಲ್ಲಿ ಇರುವುದರಿಂದ ಈಗ ಮುತ್ತುಗ ದೂರಿನಲ್ಲಿ ಇನ್ನೊಂದು ಆಸ್ಪತ್ರೆ ಮಾಡುವುದು ಅಗತ್ಯ ಇಲ್ಲ ಎಂದು ಸರ್ಕಾರದ ಅಭಿಪ್ರಾಯ.

ಶ್ರೀ ಬಿ. ಪರಮೇಶ್ವರಪ್ಪ.—ಇತರೇ ಕಡೆ ಮಾಡುವ ರೀತಿಯಲ್ಲಿ ನಮ್ಮ ಹೊಳಲ್ಕೆರೆಯಿಂದ ಬೇರೆ ಕಡೆಗೆ ಈ ಆಸ್ಪತ್ರೆಯನ್ನು ವರ್ಗಾಯಿಸಿ ಕೊಡುವುದರಲ್ಲಿ ತಾರತಮ್ಯ ಏತಕ್ಕೆ ?

ಶ್ರೀ ಕೆ. ಪುಟ್ಟಸ್ವಾಮಿ.—ತಾರತಮ್ಯ ಏನೂ ಇಲ್ಲ. ಬೇರೆ ಬೇರೆ ತಾಲ್ಲೂಕುಗಳಲ್ಲಿ ಇಂತಹ ಸಂದರ್ಭದಲ್ಲಿ ಆಸ್ಪತ್ರೆಯನ್ನು ವರ್ಗಾವಣೆ ಮಾಡಿರುವುದು ಉಂಟು. ಮಾನ್ಯ ಸದಸ್ಯರು ಹೊಳಲ್ಕೆರೆ ತಾಲ್ಲೂಕಿನಲ್ಲಿ ಇರತಕ್ಕ 6 ಬ್ಲಾಕುಗಳಲ್ಲಿ ಯಾವ ಬ್ಲಾಕಿನಲ್ಲಿ ಆಸ್ಪತ್ರೆ ಇಲ್ಲ ಎಂದು ತೋರಿಸಿಕೊಟ್ಟರೆ ಅಲ್ಲಿ ಕೊಡುವುದಕ್ಕೆ ಸಿದ್ಧವಾಗಿದ್ದೇವೆ.

ಶ್ರೀ ಬಿ. ಪರಮೇಶ್ವರಪ್ಪ.—ಈಗಾಗಲೇ ಹೇಳಿದ್ದಾರೆ. 15 ಸಾವಿರ ಪ್ರಜಾಸಂಖ್ಯೆಗೆ ಒಂದು ಎಂದು ಸುತ್ತಮುತ್ತ ಇರತಕ್ಕ ಮುತ್ತಗದೂರು ಮಧ್ಯ ಗ್ರಾಮ. ಬರಮನಾಯಕನ ದುರ್ಗದ ಮಧ್ಯೆ ಇದೆ. ಅಲ್ಲಿ ಒಂದು ಕಡೆ ಇರುವುದರಿಂದ ಆ ಗ್ರಾಮಕ್ಕೆ ಆಸ್ಪತ್ರೆ ಕೊಡುವುದು ಅತ್ಯಾವಶ್ಯಕ ಇದೆ. ತಾಲ್ಲೂಕು ಬೋರ್ಡ್‌ನವರು ಶಿಫಾರಸ್ಸು ಮಾಡಿದ್ದಾರೆ. ಇದನ್ನು ಗಮನಕ್ಕೆ ತೆಗೆದು ಕೊಂಡು ಮಂಜೂರು ಮಾಡಬೇಕು ಎಂದು ಹೇಳುತ್ತೇನೆ.

ಶ್ರೀ ಕೆ. ಪುಟ್ಟಸ್ವಾಮಿ.—ಅದು ಮಾನ್ಯ ಸದಸ್ಯರ ಅಭಿಪ್ರಾಯ. ಈ ಬ್ಲಾಕಿನಲ್ಲಿ ಬರಮ ನಾಯಕನದುರ್ಗದಲ್ಲಿ ಒಂದು ಆಸ್ಪತ್ರೆ ಇರುವುದರಿಂದ ಅಲ್ಲಿಗೆ ಇನ್ನೊಂದು ಆಸ್ಪತ್ರೆಯನ್ನು ಕೊಡು ವುದಕ್ಕೆ ಸಾಧ್ಯವಿಲ್ಲ ಎಂಬುದು ಸರ್ಕಾರದವರ ಅಭಿಪ್ರಾಯ.

Complaint against the Taluk Office at Siruguppa in Procuring Paddy

57. **Sri H. SIDDAVEERAPPA** (Harihar).—

Will the Minister for Food and Civil Supplies be pleased to state.—

(*a*) whether Government have received a complaint on 1st May 1967 that fraud to an extent of one and a half lakhs of rupees has been committed in the Taluk Office at Siruguppa in procuring paddy ;

(*b*) whether the matter was investigated ;

(*c*) if so, the result of the investigation ?

A.—**Sri B. D. JATTI** (Minister for Food and Civil Supplies).—

(*a*) No.

(*b*) and (*c*) do not arise.

Sri H. SIDDAVEERAPPA.—Sir, does the Hon'ble Minister remember that in this behalf I addressed a letter to him some time back ?

Sri B. D. JATTI.—Yes, Sir.

Sri H. SIDDAVEERAPPA.—Did he get it investigated ?

Sri B. D. JATTI.—Yes.

Sri H. SIDDAVEERAPPA.—Will he be pleased to place the report of the investigation on the table of the House.

Sri B. D. JATTI.—It is not necessary because nothing is found out